www.prepp.in

prepp
Your Personal Exams Guide



# KANNADA

## PAPER—II

## ( LITERATURE )

Time Allowed : Three Hours

Maximum Marks : 250

### QUESTION PAPER SPECIFIC INSTRUCTIONS

**Please read each of the following instructions carefully before attempting questions**

There are EIGHT questions divided in two Sections.

Candidate has to attempt FIVE questions in all.

Question Nos. **1** and **5** are compulsory and out of the remaining, THREE are to be attempted choosing at least ONE question from each Sections.

The number of marks carried by a question/part is indicated against it.

Answers must be written in KANNADA (Kannada script).

Word limit in questions, wherever specified, should be adhered to.

Attempts of questions shall be counted in chronological order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

www.prepp.in

Prepp
Your Personal Exams Guide

## SECTION—A

1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ: (ಪ್ರತಿಯೊಂದೂ 150 ಪದಗಳ ಮಿತಿಯಲ್ಲಿರಲಿ): 10×5=50

(a) ಎಳೆ ಮುಂ ದೈತ್ಯನ ಕೆಯ್ಗೆ ಪೋಗೆ ತರಲೆಂದೀ ಚಕ್ರಿ ಮುನ್ನಂ ರಸಾ
ತಳಮಂ ಪೊಕ್ಕುದುಮೀ ಮಹೋಗ್ರ ರಣದೊಳ್ ನಿಮ್ಮೊಂದು ಕೆಯ್ಗಿಳ್ದ ಭೂ
ತಳಮಂ ಮತ್ತೆ ತರಲ್ ವಿಶುದ್ಧ ನಿಯಮ ಪ್ರಾರಂಭದಿಂದಾನು ಮೀ
ಕೊಳನಂ ಪೊಕ್ಕುದುಮಾವ ದೋಷಮೆನಗಿಂ ಮಾರಾಂಪರಾರ್ ತೋರಿರೇ.

(b) ದ್ಯುಮಣಿ ಕರ್ಣದ್ಯುಮಣಿ ಸಹಿತ
ಸ್ತಮಿಸೆ ಕಮಲಿನಿ ಕೌರವನ ಮುಖ
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ
ಅಮಳ ಚಕ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆ ಅಗಲಿಕೆ
ಸಮನಿಸಿತು ಕೇಳಯ್ಯ ಜನಮೇಜಯ ಮಹೀಪಾಲ.

(c) ದೇಗುಲ ಭಾರವ ಗೋಡೆ ಕಂಭದ ಮಂಡೆ
ಗಾಗಿಸಿ ದೇವರಿಪ್ಪಂತೆ
ಭಾಗಿಸಿ ಧರೆಯ ದಂದುಗವನಾಪ್ತರಿಗೆ ಸಂ
ಯೋಗಿಸಿ ಸುಖದಿ ತಾನಿಹನು.

(d) ಹಣ್ಣು ಕೊಂಬುವ ಬನ್ನಿರಿ - ಹರಿದಾಸರು
ಹಣ್ಣು ಕೊಂಬುವ ಬನ್ನಿರಿ
ತುರುವ ಕಾಯ್ದ ಹಣ್ಣು ಉರಗನ ತುಳಿದ ಹಣ್ಣು
ಕರೆದರೆ ಕಂಬದೊಳು ಓಯೆಂಬ ಹಣ್ಣು
ಮರುಗುವ ಧ್ರುವನಿಗೆ ಪಟ್ಟಗಟ್ಟಿದ ಹಣ್ಣು
ಕರುಣಾಳು ಕಾಗಿನೆಲೆಯಾದಿಕೇಶವ ಹಣ್ಣು.

(e) ಆದ ಮುಳಿಸಿಂದ ಮೆಲ್ವಂ
ತೇದು ಕುಡಿಯಲ್ಕೆ ತಕ್ಕ ಪಗೆವನ ರುಧಿರಾ
ಪ್ಯೋದಮನೆ ಕುಡಿದು ಮಾಣ್ದ ವೃ
ಕೋದರನೇನಾವ ತೆರದೊಳಂ ದೋಷಿಗನೇ

2. (a) ಸುಕುಮಾರಸ್ವಾಮಿ ಕಥೆ ಹಾಗೂ ವಿದ್ಯುಚ್ಚೋರ ಕಥೆಗಳಲ್ಲಿ ತಾತ್ತ್ವಿಕತೆಯ ದೃಷ್ಟಿಯಿಂದ ಕಾಣುವ ಸಾಮಾನ್ಯ ಅಂಶಗಳನ್ನು ವಿಶ್ಲೇಷಿಸಿರಿ. 20

(b) 'ಕರ್ಣಂಗೊಡ್ಡಿತ್ತು ದಲ್ ಭಾರತಂ' ಎಂಬ ಪಂಪನ ಹೇಳಿಕೆಯನ್ನು ಕುಮಾರವ್ಯಾಸನ ಕರ್ಣನ ಪಾತ್ರದೊಡನೆ ಹೋಲಿಸಿ, ಎರಡರ ವ್ಯತ್ಯಾಸವನ್ನು ಚರ್ಚಿಸಿ. 20

www.prepp.in

Prepp
Your Personal Exams Guide

(c) 'ಭರತೇಶ ವೈಭವ' ಕಾವ್ಯದಲ್ಲಿ ಭೋಗ ಮತ್ತು ವೈರಾಗ್ಯದ ನಿರೂಪಣೆಯಲ್ಲಿ ಕವಿ ತೋರಿರುವ ವೈಶಿಷ್ಟ್ಯತೆಯನ್ನು ಚರ್ಚಿಸಿ. 10

3. (a) ಅಕ್ಕನ ವಚನಗಳಲ್ಲಿ ಕಾಣುವ ಪ್ರಮುಖವಾದ ಆಶಯವು, ಆ ಕಾಲದ ಉಳಿದ ವಚನಕಾರ್ತಿಯರ ಆಶಯಗಳಿಗಿಂತ ಹೇಗೆ ಭಿನ್ನವಾಗಿದೆ? ನಿಮಗೆ ಇಟ್ಟಿರುವ ವಚನಗಳ ಹಿನ್ನೆಲೆಯಲ್ಲಿ ಚರ್ಚಿಸಿ. 20

(b) ಕುಮಾರವ್ಯಾಸನ ಕೃಷ್ಣನ ಪಾತ್ರದಲ್ಲಿ ಕಾಣುವ 'ರಾಜಕಾರಣಿ', 'ದೈವತ್ವ' ಮತ್ತು 'ಮಾನವೀಯ' ವ್ಯಕ್ತಿತ್ವಗಳನ್ನು ಉದಾಹರಣೆಗಳೊಂದಿಗೆ ವಿಶದೀಕರಿಸಿ. 20

(c) ಕನಕದಾಸರ ಕೀರ್ತನೆಗಳಲ್ಲಿ ಪ್ರತಿರೋಧದ ಅಂಶವು ಪ್ರಕಟಗೊಂಡಿರುವ ಬಗೆಗಳನ್ನು ವಿವರಿಸಿ. 10

4. (a) ಹರಿಹರನ ಭಕ್ತಿಯ ಪರಿಕಲ್ಪನೆಗೂ, ಕುಮಾರವ್ಯಾಸನ ಭಕ್ತಿಯ ಪರಿಕಲ್ಪನೆಗೂ ಇರುವ ಸಂಬಂಧಾಂತರಗಳನ್ನು ನಿಮಗಿಟ್ಟಿರುವ ಪಠ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ. 20

(b) ಅಲ್ಲಮಪ್ರಭುಗಳ ತಾತ್ವಿಕ ನೆಲೆಗಳನ್ನು ವಚನಗಳ ಹಿನ್ನೆಲೆಯಲ್ಲಿ ಚರ್ಚಿಸಿರಿ. 20

(c) ವಡ್ಡಾರಾಧನೆಯ ಕಥೆಗಳಲ್ಲಿ ಬರುವ 'ಉಪಕಥೆ'ಗಳ ಅನಿವಾರ್ಯತೆಯನ್ನು ನಿಮಗೆ ಇಟ್ಟಿರುವ ಕಥೆಗಳ ಹಿನ್ನೆಲೆಯಲ್ಲಿ ಚರ್ಚಿಸಿ. 10

## SECTION—B

5. ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಪ್ರತಿ ವಿಷಯಕ್ಕೆ ಸುಮಾರು 150 ಪದಗಳು): 10×5=50

(a) ಬೇಂದ್ರೆಯವರ 'ಕುರುಡು ಕಾಂಚಾಣ' ಕವನದಲ್ಲಿರುವ ರೂಪಕಗಳ ವಿಶಿಷ್ಟತೆ

(b) ರಾಜರತ್ನಂ ಅವರ 'ಯೆಂಡ್ಕೊಡುಕ ರತ್ನ'ದ ಭಾಷಿಕ ಸ್ವರೂಪ

(c) ಮಾಸ್ತಿಯವರ 'ಮೊಸರಿನ ಮಂಗಮ್ಮ' ಕಥೆಯಲ್ಲಿ ಕಾಣುವ 'ದೇಸಿಯತೆ'

(d) 'ಒಡಲಾಳ' ಕಾದಂಬರಿಯಲ್ಲಿ ಕಾಣುವ ಪ್ರತಿಮಾ ವಿನ್ಯಾಸಗಳು

(e) 'ತುಘಲಕ್' ನಾಟಕದಲ್ಲಿ ಚಿತ್ರಣಗೊಂಡಿರುವ 'ಅಪರಿಪೂರ್ಣತೆ'ಯ ತತ್ವ

6. (a) ಕನ್ನಡದ ನವ್ಯ ಕಥೆಗಳಲ್ಲಿ ಕಾಣುವ 'ಅನಾಥ ಪ್ರಜ್ಞೆ'ಯ ವಿಭಿನ್ನ ಸ್ವರೂಪವನ್ನು, ನಿಮಗೆ ಇಟ್ಟಿರುವ ಅನಂತಮೂರ್ತಿ ಮತ್ತು ದೇವನೂರ ಮಹಾದೇವ ಅವರ ಕಥೆಗಳ ಹಿನ್ನೆಲೆಯಲ್ಲಿ ಚರ್ಚಿಸಿ. 20

(b) ಯಶವಂತ ಚಿತ್ತಾಲರ ಕಥೆಗಳಲ್ಲಿ ಕಾಣುವ ಮನುಷ್ಯ ಸಂಬಂಧಗಳ ವೈವಿಧ್ಯತೆಯನ್ನು ಸೋದಾಹರಣವಾಗಿ ವಿವರಿಸಿ. 20

(c) ಕನ್ನಡ ಜನಪದ ಕಥೆಗಳ ವರ್ಗೀಕರಣ ವಿಧಾನವನ್ನು ಪರಿಶೀಲಿಸಿರಿ. 10



Prepp Your Personal Exam Guide

www.prepp.in

Your Personal Exams Guide

7. (a) ಕನ್ನಡದ 'ನವ್ಯ' ಹಾಗೂ 'ನವೋದಯ' ಕವಿತೆಗಳ ನಡುವಣ ತಾತ್ವಿಕ ವೈರುಧ್ಯವನ್ನು ಸೋದಾಹರಣವಾಗಿ ವಿವರಿಸಿ. 20

(b) ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕವು 'ಆಧುನಿಕ ಕಾಲ'ದಲ್ಲಿ ಪ್ರಸ್ತುತಗೊಳ್ಳುವ ಬಗೆಯನ್ನು ಉದಾಹರಣೆಗಳ ಸಹಿತ ಚರ್ಚಿಸಿ. 20

(c) ಮೂರ್ತಿರಾಯರ 'ದೇವರು' ಕೃತಿಯು 'ದೈವ'ದ ನಂಬಿಕೆಯನ್ನು ಬುದ್ಧಿಪೂರ್ವಕ ನೆಲೆಯಲ್ಲಿ (ರ್‍ಯಾಶನಲ್) ಸರಳೀಕರಣಗೊಳಿಸಿದೆಯೇ? ಚರ್ಚಿಸಿ. 10

8. (a) 'ಜಾನಪದ ಸ್ವರೂಪ' ಕೃತಿಯಲ್ಲಿ ಮಂಡಿತವಾಗಿರುವ 'ಜಾನಪದ' ಪರಿಕಲ್ಪನೆಯನ್ನು ಕುರಿತ ವಿಚಾರಗಳು, ಹಳೆಯ ಮಾದರಿಯವು ಎಂದು ಹೇಳಬಹುದೇ? ವಿಚಾರ ಮಾಡಿ. 20

(b) 'ಮಾಧವಿ' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಹಿಳೆಯ ವ್ಯಕ್ತಿತ್ವವು ಎಷ್ಟು ಆಧುನಿಕವೆನ್ನುವುದನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ. 20

(c) 'ಬೆಟ್ಟದ ಜೀವ' ಕಾದಂಬರಿಯಲ್ಲಿ ಕಾಣುವ 'ಸ್ಥಳೀಕರಣ'ದ ಸಂಕಟಗಳು ಎಂಥವು? ವಿವರಿಸಿ. 10

★ ★ ★